ದಿನಾಂಕಃ 21.10.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀಸವಾಲುಃ ಪ್ರತಿವಾದಿಯರ ಪರ ಶ್ರೀ ಎಮ್.ಆರ್.ಬಿ ವಕೀಲರಿಂದಃ**

ದಿ:14.08.2006 ರಂದು ನಾನು 1ನೇ ಪ್ರತಿವಾದಿಗೆ ದಾವಾ ಆಸ್ತಿಗೆ ಸಂಬಂಧಿಸಿದಂತೆ ರೂ.1,36,000/- ಗಳನ್ನು ಪಡೆದು ಖರೀದಿ ಕರಾರ ಪತ್ರ ಬರೆದುಕೊಟ್ಟಿದ್ದು, ನಂತರ ದಿ:30.03.2013 ರಂದು ಸದರಿ ಖರೀದಿ ಕರಾರ ಪತ್ರವನ್ನು ಮೇಲೆ ಹೇಳಿದ ಹಣವನ್ನು ಕೊಟ್ಟು ರದ್ದುಪಡಿಸಿಕೊಂಡಿರುತ್ತೇನೆ ಎಂದರೆ ಸರಿ. ಸದರಿ ಬಿನ್ ಕಬ್ಜಾ ಖರೀದಿ ಕರಾರ ಪತ್ರದ ರದ್ದತಿ ಪತ್ರವನ್ನು ಈಗ ನೋಡುತ್ತಿದ್ದೇನೆ. ಸದರಿ ಪತ್ರವನ್ನು ಸಾಕ್ಷಿ ನೋಡಿ ಒಪ್ಪಿಕೊಂಡಿದ್ದರಿಂದ ಅದನ್ನು ಮುಖಾಬಲೆಯಾಗಿ ನಿಡಿ.3 ಎಂದು ಗುರುತಿಸಲಾಯಿತು. ನಿಡಿ.3 ರಂತೆ ಸದರಿ 1ನೇ

ಪ್ರತಿವಾದಿ ದಾವಾ ಆಸ್ತಿಯಗೆ ಸಂಬಂಧಿಸಿದಂತೆ ತನಗೆ ಯಾವುದೇ ಹಕ್ಕು ಇರುವುದಿಲ್ಲ ಎಂದು ರದ್ದತಿ ಪತ್ರ ಬರೆದುಕೊಟ್ಟಿರುತ್ತಾನೆ ಎಂದರೆ ನಿಜ. ಸದರಿ ನಿಡಿ.3 ಹಾಗೂ ನಿಪಿ.11 ನ್ನು ಎಸ್.ಡಿ.ಸಿರಸಂಗಿ ಬಾಂಡ್ ರೈಟರ್ ರವರು ಬರೆದಿರುತ್ತಾರೆ ಎಂದರೆ ನಿಜ. ನಿಡಿ.3 ಉಪನೊಂದಣಿ ಕಛೇರಿಯಲ್ಲಿ ದಿ:02.04.2013 ರಂದು ನೊಂದಣಿಯಾಗಿರುತ್ತದೆ ಎಂದರೆ ನಿಜ. ಸದರಿ ನಿಡಿ.3 ರಲ್ಲಿ ನನ್ನ ಹಾಗೂ 1ನೇ ಪ್ರತಿವಾದಿಯ ಭಾವಚಿತ್ರಗಳು ಇರುತ್ತವೆ ಎಂದರೆ ನಿಜ. ನಾನು ನಿಡಿ.3 ರಂತೆ ಬಾಂಡ್ ರೈಟರ್ ಕಛೇರಿಯಲ್ಲಿ ಹಾಗೂ ಉಪನೊಂದಣಿ ಕಛೇರಿಯಲ್ಲಿ ನಿಪಿ.3 ರಲ್ಲಿ ಇಂಗ್ಲೀಷನಲ್ಲಿ K.G.HULLOLI ಎಂದು ಸಹಿ ಹಾಕಿರುತ್ತೇನೆ ಎಂದರೆ ನಿಜ.

ಸದರಿ ದಿ:02.04.2013 ರಂದು ನಿಡಿ.3 ರಂತೆ ಬಿನ್ ಕಬ್ಜಾ ಖರೀದಿ ಕರಾರ ಪತ್ರದ ರದ್ದತಿ ಆದ ದಿನದಂತೆ ದಾವಾ ಆಸ್ತಿ ಹಾಗೂ ಇನ್ನೂ ಎರಡು ಆಸ್ತಿಗಳಿಗೆ ಸಂಬಂಧಿಸಿದಂತೆ 1ನೇ ಪ್ರತಿವಾದಿ ಹಾಗೂ ಅವನ ಮಗನಾದ ವೀರಭದ್ರನಿಗೆ ರೂ.5,50,000/- ಗಳನ್ನು ಕೊಟ್ಟು ಅವರಿಂದ ಇನ್ನೊಂದು ಬಿನ್ ಕಬ್ಜಾ ಖರೀದಿ ಕರಾರ ಪತ್ರ ಬರೆಸಿಕೊಂಡಿರುತ್ತೇನೆ ಎಂದರೆ ನಿಜ. ಸದರಿ ಬಿನ್ ಕಬ್ಜಾ ಖರೀದಿ ಕರಾರ ಪತ್ರವನ್ನು ದಿ:09.09.2015 ರಂದು ರದ್ದುಪಡಿಸಿಕೊಂಡಿರುತ್ತೇನೆ ಎಂದರೆ ನಿಜ. ಸದರಿ ಪತ್ರವು ದಿ:10.09.2015 ರಂದು ನೊಂದಣಿಯಾಗಿರುತ್ತದೆ ಎಂದರೆ ನಿಜ. ಈಗ ಸದರಿ ಪತ್ರವನ್ನು ನೋಡುತ್ತಿದ್ದು, ಅದನ್ನು ಮುಖಾಬಲೆಯಾಗಿ ನಿಡಿ.4 ಎಂದು ಗುರುತಿಸಲಾಯಿತು. ಸದರಿ ನಿಡಿ.4 ರಂತೆ ದಾವಾ ಆಸ್ತಿಗೆ ಸಂಬಂಧಿಸಿದಂತೆ ನನ್ನದು ಯಾವುದೇ ಹಕ್ಕು ಇರುವುದಿಲ್ಲ ಎಂದು 1ನೇ ಪ್ರತಿವಾದಿಗೆ ಸದರಿ ಪತ್ರವನ್ನು ಬರೆದುಕೊಟ್ಟಿರುತ್ತೇನೆ ಎಂದರೆ ನಿಜ. ನಿಡಿ.4 ಕ್ಕೆ ಸಾಕ್ಷಿದಾರರು ಎಂದು ಸಹಿ ಹಾಕಿದ ವ್ಯಕ್ತಿಗಳೇ ನಿಪಿ.11 ಕ್ಕೆ ಸಾಕ್ಷಿದಾರರಾಗಿ ಸಹಿ ಹಾಕಿರುತ್ತಾರೆ ಎಂದರೆ ನಿಜ. ನಿಡಿ.4 ರಲ್ಲಿರುವ ಒಕ್ಕಣಿ ಹಾಗೂ ಭಾವಚಿತ್ರಗಳನ್ನು ನಾನು ಒಪ್ಪಿಕೊಳ್ಳುತ್ತೇನೆ. ನಿಡಿ.4 ನ್ನು ಸಹ ಶಿರಸಂಗಿ ಅನ್ನುವ ಬಾಂಡ್ ರೈಟರ್ ಅವರೇ ಬರೆದಿರುತ್ತಾರೆ.

ಮೊದಲು ನಿಡಿ.4 ನ್ನು ಬರೆದ ನಂತರ ನಿಪಿ.11 ನ್ನು ಬರೆದಿರುತ್ತಾರೆ. ನಿಡಿ.4 ನ್ನು ಬರೆದ ಎಷ್ಟು ಸಮಯದ ನಂತರ ನಿಪಿ.11 ನ್ನು ದಸ್ತಬರಹಗಾರರು ಬರೆದಿರುತ್ತಾರೆ ಎಂದು ನನಗೆ ನೆನಪಿಲ್ಲ. ನಿಡಿ.4 ನ್ನು ಬರೆದ ಅರ್ಧ ಗಂಟೆಯ ನಂತರ ನಿಪಿ.11 ನ್ನು ಬರೆದಿರಬಹುದು. ನಿಡಿ.4 ಬೆಳಿಗ್ಗೆ 11 ಗಂಟೆ 18 ನಿಮಿಷ್ 47 ಸೆಕೆಂಡಿಗೆ ನೊಂದ ಆಗಿದ್ದು, ನಿಪಿ.11 ಅದೇ ದಿನ ಬೆಳಿಗ್ಗೆ 11 ಗಂಟೆ 34 ನಿಮಿಷ್ 31 ಸೆಕೆಂಡಿಗೆ ನೊಂದ ಆಗಿರುತ್ತದೆ ಎಂದರೆ ನನಗೆ ಅಷ್ಟೊಂದು ನೆನಪಿಲ್ಲ. ಸದರಿ ಎರಡು ಪತ್ರಗಳು ಬೆಳಿಗ್ಗೆ 10-12 ನಿಮಿಷಗಳ ಒಳಗೆ ನೊಂದ ಆಗಿರುತ್ತವೆ ಎಂದರೆ ಇರಬಹುದು. ಸದರಿ 10-12 ನಿಮಿಷಗಳ ಅವಧಿಯ ಒಳಗೆ ರೂ.7,28,000/- ಗಳ ಬಗ್ಗೆ ಮಾತುಕತೆಯಾಗಿರುತ್ತದೆಯಾ? ಎಂದರೆ ಸಾಕ್ಷಿಯು ಮುಂಚೆಯೇ ಮಾತುಕತೆಯಾಗಿತ್ತು ಎಂದು ನುಡಿಯುತ್ತಾರೆ. ಸದರಿ ಎರಡು ಪತ್ರಗಳು ನೊಂದಣಿ ಆಗುವ 15 ದಿನಗಳ ಮುಂಚೆ ಮಾತುಕತೆಯಾಗಿತ್ತು. ಪ್ರಸ್ತುತ ದಾವೆಯನ್ನು ಹಾಕುವ ಕಾಲಕ್ಕೆ ಸದರಿ ಮಾತುಕತೆಯಾದ ಬಗ್ಗೆ ನನಗೆ ಗೊತ್ತಿತ್ತು. ಆದರೆ ಸದರಿ ವಿಷಯವನ್ನು ವಕೀಲರಿಗೆ ಹೇಳಿಲ್ಲ. ಸದರಿ ವಿಷಯವನ್ನು ತೊಂದರೆ ಇತ್ತಾ ಎಂದರೆ ಸಾಕ್ಷಿಯು ಅದರ ವಿಷಯ ಬಂದಿರಲಿಲ್ಲ, ಏಕೆಂದರೆ ಹಳೆಯ ಕ್ರಯ ಕರಾರ ಪತ್ರವನ್ನು ರದ್ದುಪಡಿಸಿ ಹೊಸ ಕ್ರಯ ಕರಾರ ಪತ್ರವನ್ನು ಬರೆದುಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ.

ನಿಡಿ.4 ರಂತೆ ಸದರಿ ದಿನ 1ನೇ ಪ್ರತಿವಾದಿ ಮತ್ತು ಆತನ ಮಗ ವೀರಭದ್ರ ನನಗೆ ರೂ.5,50,000/- ಕೊಟ್ಟಿರುತ್ತಾರೆ ಎಂದರೆ ನಿಜ. ಸಾಕ್ಷಿ ಮುಂದುವರೆದು ಅದೇ ದಿನ ನಾನು ಅವರಿಗೆ ರೂ.7,28,000/- ಗಳನ್ನು ಕೊಟ್ಟು ನಿಪಿ.11 ರಂತೆ ಕ್ರಯ ಕರಾರ ಪತ್ರ ಬರೆಸಿಕೊಂಡಿರುತ್ತೇನೆ ಎಂದು ನುಡಿಯುತ್ತಾರೆ. ನಿಡಿ.4 ರಲ್ಲಿ ನಿಪಿ.11 ರ ಕುರಿತು ಯಾವುದೇ ಒಕ್ಕಣಿ ಮಾಡಿರುವುದಿಲ್ಲ ಎಂದರೆ ನಿಜ. 1ನೇ

ಪ್ರತಿವಾದಿ ತನಗೆ ಜಮೀನದಿಂದ ಒಳ್ಳೆಯ ಉತ್ಪನ್ನ ಬಂದಿದ್ದರಿಂದ ನನಗೆ ರೂ.5,50,000/- ಕೊಟ್ಟಿರುತ್ತಾನೆ ಎಂದರೆ ಸಾಕ್ಷಿಯು ಯಾವ ಮೂಲದಿಂದ ಆತ ನನಗೆ ಸದರಿ ಹಣವನ್ನು ಕೊಟ್ಟಿರುತ್ತಾನೆ ಎಂದು ಹೇಳಲು ಆಗುವುದಿಲ್ಲ. ಸದರಿ ಹಣ ರೂ.5,50,000/- ಗಳನ್ನು ಒಂದೇ ಭಾರಿಗೆ ಕೊಡುವ ಸಾಮರ್ಥ್ಯ ಆತ ಹೊಂದಿದ್ದ ಎಂದರೆ ನಿಜ. ಸಾಕ್ಷಿ ಮುಂದುವರೆದು ನಾನು ಆತನಿಗೆ ಮತ್ತೇ ಅದೇ ದಿನ ರೂ.7,28,000/- ಗಳನ್ನು ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ.

ನಿಡಿ.4 ಇದು 4 ಜಮೀನಗಳಿಗೆ ಸಂಬಂಧಿಸಿದ್ದು, ಅದೇ ರೀತಿ ನಿಪಿ.11 ಇದು 2 ಅಂದರೆ ದಾವಾ ಆಸ್ತಿಗಳಿಗೆ ಸಂಬಂಧಿಸಿರುತ್ತದೆ ಎಂದರೆ ನಿಜ. ನಿಪಿ.11 ರಲ್ಲಿ ಒಪ್ಪಿಗೆ ಸಾಕ್ಷಿ ಎಂದು ಪೆನ್ನಿನಿಂದ ಬರೆದಿದ್ದು, ಉಳಿದ ಸಂಗತಿಗಳನ್ನು ಗಣಕೀಕೃತ ಇರುತ್ತವೆ ಎಂದರೆ ನಿಜ. ಸಾಕ್ಷಿ ಮುಂದುವರೆದು ದಸ್ತುಬರಹಗಾರರು ಸದರಿ ಒಪ್ಪಿಗೆ ಸಾಕ್ಷಿದಾರರನ್ನು ಕೇಳಿದ ನಂತರ ಪೆನ್ನಿನಿಂದ ಒಪ್ಪಿಗೆ ಸಾಕ್ಷಿ ಎಂದು ಬರೆದಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಬರವಣಿಗೆ ದಸ್ತುಬರಹಗಾರರ ಬರವಣಿಗೆಯಾಗಿರುತ್ತದೆ. ಅದನ್ನು ಬರೆದ ಬಗ್ಗೆ ಅವರು ಚಿಕ್ಕ ರುಜು ಹಾಕಿರುವುದಿಲ್ಲ ಎಂದರೆ ನಿಜ. ಸದರಿ ನಿಪಿ.11 ರಲ್ಲಿ ಕೈಬರವಣಿಗೆ ಬಗ್ಗೆ ನಮೂದಿಸಿರುವುದಿಲ್ಲ ಎಂದರೆ ನಿಜ. ಸದರಿ ನಿಡಿ.3, 4 ಮತ್ತು ನಿಪಿ.11 ರ ಮಜಕೂರುಗಳು ಎಲ್ಲಾ ಸಾಕ್ಷಿದಾರರಿಗೆ ತಿಳಿದಿರುತ್ತವೆ.

ದಾವಾ ಆಸ್ತಿಗಳು ಭಾಗಾಯತ ಜಮೀನುಗಳಾಗಿದ್ದು, ಕಾಲುವೆಯಿಂದ ಹಾಗೂ ನದಿಯಿಂದ ನೀರಾವರಿ ಸೌಲಭ್ಯ ಹೊಂದಿದ್ದು, ಕಬ್ಬು ಬೆಳೆಯನ್ನು ಬೆಳೆಯುತ್ತಾರೆ ಎಂದರೆ ನಿಜ. ಚಿಗಡೊಳ್ಳಿ ಗ್ರಾಮದ ಜಮೀನುಗಳು ಫಲವತ್ತಾದ ಜಮೀನುಗಳು ಇರುತ್ತವೆಯಾ? ಎಂದರೆ ಇರಬಹುದು. ಆದರೆ ದಾವಾ ಆಸ್ತಿಗಳು

ಫಲವತ್ತಾದ ಜಮೀನುಗಳು ಇರುವುದಿಲ್ಲ ಎಂದು ನುಡಿಯುತ್ತಾರೆ. ನಿಪಿ.11 ರಲ್ಲಿ ಬರೆಸಿದಂತೆ ದಾವಾ ಆಸ್ತಿಗಳು ಭಾಗಾಯತ ಜಮೀನುಗಳು ಇರುತ್ತವೆ ಎಂದರೆ ನಿಜ. ಚಿಗಡೊಳ್ಳಿ ಮತ್ತು ಮೆಳವಂಕಿ ಗ್ರಾಮದ ಜಮೀನುಗಳಲ್ಲಿ ಎಕರೆಗೆ 60 ಟನ್ ಕಬ್ಬು ಬೆಳೆಯುತ್ತಾರೆ ಎಂದರೆ ಸರಿಯಲ್ಲ. ರೈತರು ತಮ್ಮ ಜಮೀನುಗಳಲ್ಲಿ ಏನೂ ಬೆಳೆ ಬೆಳೆಯುತ್ತಾರೆ ಅದನ್ನು ಗ್ರಾಮ ಲೆಕ್ಕಾಧಿಕಾರಿಗಳು ಪಹಣಿ ಪತ್ರಿಕೆಗಳಲ್ಲಿ ನಮೂದು ಮಾಡುತ್ತಾರೆ ಎಂದರೆ ನಿಜ.

ನಾನು ವಕೀಲರ ಮುಖಾಂತರ ನಿಪಿ.3 ರಂತೆ ನೀಡಿರುವ ನೋಟಿಸಿನಲ್ಲಿ ನಿಪಿ.11 ದಿ:09.09.2015 ರಂದು ನೊಂದಾಗಿರುತ್ತದೆ ಎಂದು ಬರೆಸಿರುತ್ತೀರಿ ಎಂದರೆ ನಿಜ. ಸಾಕ್ಷಿ ಮುಂದುವರೆದು ಅದು ದಿ:10.09.2015 ಆಗಬೇಕಾಗಿತ್ತು ಎಂದು ಹೇಳುತ್ತಾರೆ. ನಿಪಿ.3 ರಂತೆ ನೋಟಿಸು ನೀಡುವ ಕಾಲಕ್ಕೆ ನಿಪಿ.11 ನ್ನು ವಕೀಲರಿಗೆ ತೋರಿಸಿರುತ್ತೇನೆ. ನಾನು ಪ್ರಥಮ ಭಾರಿಗೆ ದಿ:06.09.2016 ರಂದು ಪ್ರತಿವಾದಿಯರಿಗೆ ನೋಟಿಸು ಕೊಟ್ಟಿರುತ್ತೇನೆ.

(ಈ ಹಂತದಲ್ಲಿ ಮುಂದುವರೆದ ಪಾಟೀಸವಾಲಿಗೆ ಸಮಯ ಕೋರಿದ್ದು,
ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ ರೀತಿ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸರಿ ಇದೆ

(ಮಹಾದೇವ ಕಾನಟ್ಟಿ)
1ನೇ ಹೆಚ್ಚುವರಿ ಹಿರಿಯ ದಿವಾಣಿ
ನ್ಯಾಯಾಧೀಶರು, ಗೋಕಾಕ

ಸಾಕ್ಷಿಯ ಸಹಿ